**ಸಾಕ್ಷಿಯನ್ನು ದಿನಾಂಕಃ 20.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ವಿ.ಎಸ್. ವಕೀಲರಿಂದಃ**

ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ತನ್ನ ದಾವಾ ಪತ್ರಕ್ಕೆ ಏನು ತಕರಾರು ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ದಾವಾ ಪತ್ರ ತಯಾರು ಮಾಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಯಾವ ಸ.ನಂ. ಆಸ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೀರಾ ಎಂದರೆ ಸಾಕ್ಷಿಯು ಸ.ನಂ. 70/3, ವಿಸ್ತೀರ್ಣ 01 ಎಕರೆ 30 ಗುಂಟೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಭಾಗ ಕೋರಿ ದಾವೆ ಮಾಡಿರುತ್ತೇನೆ. ಜಂಟೀ ಸ್ವಾಧೀನ ಇರುತ್ತೇವೆಂದು ತೋರಿಸಲು ಏನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆ ನೀಡಿರುತ್ತೇನೆಂದು ನುಡಿಯುತ್ತಾರೆ. ಯಾವ ಯಾವ ಸ.ನಂ. ಆಸ್ತಿಗಳಲ್ಲಿ ಜಂಟೀ ಸ್ವಾಧೀನದಲ್ಲಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ದಾವಾ ಆಸ್ತಿಯ ಸ.ನಂ. ನಲ್ಲಿ ಎನ್ನುತ್ತಾರೆ. ದಾವಾ ಆಸ್ತಿಯ ಸ.ನಂ. ನಲ್ಲಿ ನಾನು ಜಂಟೀ ಸ್ವಾಧೀನದಲ್ಲಿ ಇಲ್ಲದಿದ್ದರೂ ಸುಳ್ಳು ದಾವೆ ಮಾಡಿಕೊಂಡು ಬಂದಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗ ನನ್ನ ಜೊತೆಯೇ ಒಂದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ದಾವಾ ಆಸ್ತಿಯನ್ನು ಹೊರತುಪಡಿಸಿ ತಮ್ಮ ತಂದೆಯ ಹೆಸರಿಗೆ ಮತ್ತು ತಮ್ಮ ಹೆಸರಿಗೆ ಮತ್ತು ತಮ್ಮ ಸಹೋದರರ ಹೆಸರಿಗೆ ಯಾವ ಆಸ್ತಿಗಳು ಇವೆ ಎಂದು ಕೇಳಲಾಗಿ ಸಾಕ್ಷಿಯು ಬೇರೆ ಯಾವ ಆಸ್ತಿಗಳು ಇಲ್ಲಾ ಎನ್ನುತ್ತಾರೆ. ನಾನು ವಾಸವಿರುವ ಮನೆ ಮೂಲತಃ ತಮ್ಮ ತಂದೆಗೆ ಸೇರಿದ್ದು ಎಂದರೆ ಸಾಕ್ಷಿಯು ನಮ್ಮ ತಾತ-ಮುತ್ತಾತರವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಈ ಮೊದಲೇ ನನ್ನ ಮತ್ತು ಪ್ರತಿವಾದಿಯರ ನಡುವೆ ಆಸ್ತಿಗಳ ಸಂಬಂಧ ವಿಭಾಗ ಆಗಿದ್ದರೂ

ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ವಿಭಾಗ ಆಗಿಲ್ಲ, ದಾವಾ ಆಸ್ತಿಯಲ್ಲಿ ಜಂಟೀ ಸ್ವಾಧೀನ ಇರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಗ್ರಾಮದಲ್ಲಿ ಪಂಚಾಯಿತಿ ಸೇರಿಸಿದ್ದೆವು ಎಂದು ಹೇಳಿದ್ದು, ಯಾವ ದಿನಾಂಕ ಎಂದು ಕೇಳಲಾಗಿ ಸಾಕ್ಷಿಯು ನಾನು ಪಂಚಾಯಿತಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ದಾವೆ ಹೂಡಲು ವ್ಯಾಜ್ಯ ಕಾರಣ ದಿನಾಂಕಃ 22.09.2020 ರಂದು ಆಗಿರುತ್ತದೆಂದು ತಾವು ದಾವಾ ಪತ್ರದಲ್ಲಿ ಹೇಳಿದ್ದು ಏನು ವ್ಯಾಜ್ಯ ಕಾರಣ ಎಂದು ಕೇಳಲಾಗಿ ಸಾಕ್ಷಿಯು ಪಹಣಿ ಪತ್ರಿಕೆಯನ್ನು ತೆಗೆಸಿ ನೋಡಿದಾಗ ದಾವಾ ಆಸ್ತಿಯು ಪ್ರತಿವಾದಿಯರ ಹೆಸರಿಗೆ ಆಗಿರುವ ವಿಚಾರ ತನಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ತಾಲ್ಲೋಕು ಕಛೇರಿಗೆ ಅರ್ಜಿ ಸಲ್ಲಿಸಿದ ನಂತರ ದಾವಾ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ತಮಗೆ ಗೊತ್ತಾಗಿರುತ್ತದೆಂದು ತಾವು ಹೇಳಿದ್ದು ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 3 ನೇ ಪ್ರತಿವಾದಿ ತಾಲ್ಲೋಕು ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ನಾನು ಮತ್ತು 3 ನೇ ಪ್ರತಿವಾದಿ ಷರೀಕ್ ಆಗಿ ಸುಳ್ಳು ದಾವೆ ಮಾಡಿರುತ್ತೇವೆಂದರೆ ಸರಿಯಲ್ಲ. ಸ.ನಂ. 11/1 ರಲ್ಲಿ ಒಟ್ಟು ಎಷ್ಟು ಎಕರೆ ಎಂದರೆ ಸಾಕ್ಷಿಯು 01 ಎಕರೆ 03 ಗುಂಟೆ ಇದ್ದು, ಸದರಿ ವಿಸ್ತೀರ್ಣದಲ್ಲಿ 11 ಗುಂಟೆ ಮಾರಾಟ ಮಾಡಿರುತ್ತೇವೆ ಮತ್ತು 10 ಗುಂಟೆ ರಸ್ತೆಗೆ ಸ್ವಾಧೀನಪಡಿಸಿಕೊಳ್ಳಲಾಗಿದೆ. 11 ಗುಂಟೆ ವಿಸ್ತೀರ್ಣವನ್ನು ಮಾರಾಟ ಮಾಡಿರುತ್ತೇವೆಂದು ಹೇಳಿದ್ದು, ಯಾರಿಗೆ ಎಂದರೆ ಸಾಕ್ಷಿಯು ಪುಟ್ಟೇಗೌಡರವರಿಗೆ ಎಂದು ನುಡಿಯುತ್ತಾರೆ. ಸದರಿಯವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಉಳಿಕೆ 21½ ಗುಂಟೆ ಜಮೀನನ್ನು 6 ನೇ ಪ್ರತಿವಾದಿ ಕಾಳೇಗೌಡರವರಿಗೆ ದಿನಾಂಕಃ 17.08.2007

ರಂದು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಾಗದ ರೀತಿಯಲ್ಲಿ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. 6 ನೇ ಪ್ರತಿವಾದಿ 7 ನೇ ಪ್ರತಿವಾದಿಗೆ ದಿನಾಂಕಃ 13.07.2012 ರಂದು ಮಾರಾಟ ಮಾಡಿರುತ್ತಾರೆಂದರೆ ಸರಿ. ವಿಸ್ತೀರ್ಣ 21 ½ ಗುಂಟೆ ಜಮೀನಿನಲ್ಲಿ 7 ನೇ ಪ್ರತಿವಾದಿಯೇ ಸ್ವಾಧೀನ ಇದ್ದು, ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯ ಖಾತೆ ಬದಲಾವಣೆ ಆಗಿರುವುದು ಎಂದರೆ ನಿಜ ಆದರೆ ನಾನೇ ಸ್ವಾಧೀನದಲ್ಲಿರುತ್ತೇನೆಂದು ನುಡಿಯುತ್ತಾರೆ. ತಾವು ಅಲ್ಲಿ ಸ್ವಾಧೀನದಲ್ಲಿ ಇರದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಮಾಡುವಾಗ ನನ್ನ ಸಹೋದರರು ಮತ್ತು ನನ್ನ ತಂದೆ ಸಹಿ ಮಾಡಿರುತ್ತಾರೆಂದರೆ ಸರಿ. ದಾವಾ ಆಸ್ತಿಯನ್ನು ಲಪಟಾಯಿಸಬೇಕಂಬ ಉದ್ದೇಶದಿಂದ 3 ನೇ ಪ್ರತಿವಾದಿಯೊಂದಿಗೆ ನಾನು ಷರೀಕ್ ಆಗಿ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಮಾನ್ಯ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**